# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಮದ್ದೂರು ತಾಲ್ಲೂಕಿನ ಹೆಬ್ಬಳ್ಳದಿಂದ ನೀರನ್ನು ಎತ್ತಿ ಹೊಸ ಮದ್ದೂರು ಶಾಖಾ ಕಾಲುವೆಯ 47ನೇ ಕಿ.ಮೀ.ನ ಮುಂದೆ ಬರುವ ಭಾದಿತ ಅಚ್ಚುಕಟ್ಟಿಗೆ ನೀರನ್ನು ಒದಗಿಸುವ ಯೋಜನೆಯ ಡಿ.ಪಿ.ಆರ್ ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

** ** **

*ಓದಲಾಗಿದೆ :-*

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಬೆಂಗಳೂರು, ಇವರ ಪತ್ರ ಸಂಖ್ಯೆ: ಕಾನೀನಿ/ತಾಂತ್ರಿಕ-2/ವಿ.ಸಿ.ಡಿ/246/2018-19/2408, ದಿನಾಂಕ:11/26-10-2018.

*ಪ್ರಸ್ತಾವನೆ :-*

ಮೇಲೆ ಓದಲಾದ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು, ಇವರು ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕಿನ ಚಿಕ್ಕರಸಿನಕೆರೆ ಏತ ನೀರಾವರಿ ಯೋಜನೆಯನ್ನು ಚಿಕ್ಕರಸಿನಕೆರೆಯ ಬಳಿ ಇರುವ ಹೆಬ್ಬಳ್ಳದಿಂದ ಹೊಸ ಮದ್ದೂರು ಶಾಖೆಯ ಸ: 50.35 ಕಿಮೀ ನಂತರ ಕೊನೆಯ ಭಾಗದ ಭಾದಿತ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಒದಗಿಸಲು ಉದ್ದೇಶಿಸಿ ಸಿವಿಲ್ ಕಾಮಗಾರಿಯ ಅಂದಾಜು ಮೊತ್ತ ರೂ.75.00 ಲಕ್ಷಗಳ ಪ್ರಸ್ತಾವನೆಗೆ ದಿನಾಂಕ:21-10-1994 ರಂದು ಹಾಗೂ ಪಂಪ್ ಮತ್ತು ಮಿಷನರಿಗಳ ಸರಬರಾಜು ಅಳವಡಿಕೆ ಪರೀಕ್ಷಿಸುವುದು ಹಾಗೂ ಕಮಿಷನಿಂಗ್ ಮಾಡುವ ಕಾಮಗಾರಿಯ ರೂ.42.50 ಲಕ್ಷಗಳ ಅಂದಾಜಿಗೆ ದಿನಾಂಕ:16-11-1994 ರಲ್ಲಿ ತಾಂತ್ರಿಕ ಮಂಜೂರಾತಿ ನೀಡಲಾಗಿದ್ದು, ಈ ಎಲ್ಲಾ ಸಿವಿಲ್ ಕಾಮಗಾರಿಗಳು ಬಹುತೇಕ ಮುಗಿದಿರುವುದಾಗಿ ವರದಿ ಮಾಡಿರುತ್ತಾರೆ.

2. ಮಧ್ಯ ಭಾಗಗಳಲ್ಲಿ ಅಲ್ಲಲ್ಲಿ ಎಂ.ಎಸ್ ಸ್ಪೇಷಲ್‌ಗಳನ್ನು ಅಳವಡಿಸುವ ಕಾಮಗಾರಿಗಳು ಸೇರಿದಂತೆ, ಕೆಲವು ಕಾಮಗಾರಿಗಳು ಇಂದಿಗೂ ಬಾಕಿ ಉಳಿದಿದೆ. ಸದರಿ ಯೋಜನೆಯ ವಿದ್ಯುತ್ ಉಪಕರಣಗಳ ಸರಬರಾಜು ಅಳವಡಿಕೆ ಪರೀಕ್ಷೆ ಕಮಿಷನಿಂಗ್ ಮಾಡುವ ಕಾಮಗಾರಿ ಪ್ರಗತಿಯಲ್ಲಿರುವಾಗಲೇ ಅಳವಡಿಸಿದ ಪಂಪ್ ಮತ್ತು ಮೋಟಾರ್‌ಗಳನ್ನು ಹಾಗೂ ಪ್ಯಾನಲ್ ಬೋರ್ಡ್‌ಗಳನ್ನು ಬಿಚ್ಚಿ ಹಲವಾರು ಬೆಲೆ ಬಾಳುವ ಬಿಡಿ ಭಾಗಗಳು ಕಳ್ಳತನವಾಗಿರುತ್ತದೆ. ಈ ಎಲ್ಲಾ ಕಾಮಗಾರಿಗಳಿಗೆ ಒಟ್ಟಾರೆ ರೂ.109.40 ಲಕ್ಷಗಳು ವೆಚ್ಚವಾಗಿರುತ್ತದೆ ಎಂದು ವರದಿ ಮಾಡಿರುತ್ತಾರೆ.

3. ಚಿಕ್ಕರಸಿನಕೆರೆ ಏತ ನೀರಾವರಿ ಯೋಜನೆಯನ್ನು ಕೈಬಿಡದಂತೆ ಬಾಧಿತ ಅಚ್ಚುಕಟ್ಟು ಪ್ರದೇಶಗಳಿಗೆ ನೀರೊದಗಿಸುವ ಸಲುವಾಗಿ, ಪುನರುಜ್ಜೀವನಗೊಳಿಸಬೇಕೆಂದು ಗ್ರಾಮಸ್ಥರು, ಜನ ಪ್ರತಿನಿಧಿಗಳು ಮನವಿಗಳನ್ನು ಸಲ್ಲಿಸಿರುತ್ತಾರೆ. ಕುಂಠಿತ ಏತ ನೀರಾವರಿ ಯೋಜನೆಗಳ ಸ್ಥಿತಿ-ಗತಿಗಳನ್ನು ಅರಿಯಲು ಇಬ್ಬರು ನಿವೃತ್ತ ಮುಖ್ಯ ಇಂಜಿನಿಯರ್‌ಗಳನ್ನು ನಿಗಮವತಿಯಿಂದ ನೇಮಿಸಿದ್ದು, ಸದರಿಯವರು ಹಾಲಿ ಇರುವ ಯೋಜನೆಯನ್ನು ಪರಿವೀಕ್ಷಣೆ ಮಾಡಿ, ಹೊಸದಾಗಿ ಯೋಜನೆಯನ್ನು ಪ್ರಾರಂಭಿಸಬೇಕಾದರೆ, ಹೊಸದಾಗಿ ಎಲ್ಲಾ ಕಾಂಪೋನೆಂಟ್ಸ್ ಅಳವಡಿಸುವುದು ಸೂಕ್ತವೆಂದು ಸಲಹೆ ನೀಡಿರುತ್ತಾರೆ.

4. ಅದರನ್ವಯ, ಹಳೆಯ ಯೋಜನೆಗೆ ನಿರ್ಧರಿಸಿದ 1450 ಎಕರೆ ಅಚ್ಚುಕಟ್ಟುಗಳ ಜೊತೆಗೆ 30ನೇ ವಿತರಣಾ ನಾಲೆಯ ಅಚ್ಚುಕಟ್ಟು 290 ಎಕರೆ ಹಾಗೂ 31ನೇ ವಿತರಣಾ ನಾಲೆ ಅಚ್ಚುಕಟ್ಟು 928 ಎಕರೆಗಳು ಒಟ್ಟಾರೆ ಎಲ್ಲ ಅಚ್ಚುಕಟ್ಟು ಸೇರಿ 2668 ಎಕರೆ ಅಚ್ಚುಕಟ್ಟುಗಳಿಗೆ ನೀರೊದಗಿಸುವ ಹಿತದೃಷ್ಟಿಯಿಂದ ಚಿಕ್ಕರಸಿನಕೆರೆ ಏತ ನೀರಾವರಿ ಯೋಜನೆಯನ್ನು ಪುನರುಜ್ಜೀವನಗೊಳಿಸುವ ಸಲುವಾಗಿ ಹೊಸ ಮದ್ದೂರು ಶಾಖೆಯ 30, 31ನೇ ವಿತರಣಾ ನಾಲೆಯ ಮತ್ತು ಹೊಸ ಮದ್ದೂರು ಶಾಖೆಯ ಸರಪಳಿ: 5.35 ಕಿಮೀ ನ ಮುಂದೆ ಬರುವ ಬಾಧಿತ ಅಚ್ಚುಕಟ್ಟು ಪ್ರದೇಶಗಳಿಗೆ ಸಿ.ಎ ಕೆರೆ ಹೆಬ್ಬಾಳ್ಳದಿಂದ ಏತ ನೀರಾವರಿ ಯೋಜನೆಯನ್ನು ನಿರ್ಮಿಸುವ ಕಾಮಗಾರಿಯನ್ನು ಕೈಗೊಳ್ಳಲು ಉದ್ದೇಶಿಸಲಾಗಿರುತ್ತದೆ.

5. **ನೀರಿನ ಬೇಡಿಕೆ ಮತ್ತು ಲಭ್ಯತೆ:** ಹೊಸ ಮದ್ದೂರು ಶಾಖೆಯ 30ನೇ ವಿತರಣಾ ನಾಲೆಯಿಂದ 35ನೇ ಏ ವಿತರಣಾ ನಾಲೆಗಳ ಅಡಿಯಲ್ಲಿ ಬರುವ ಒಟ್ಟು 2668 ಎಕರೆ ಭಾದಿತ ಅಚ್ಚುಕಟ್ಟು ಪ್ರದೇಶಕ್ಕೆ ನೀರೊದಗಿಸಲು, ಖಾರಿಫ್ ಬೆಳೆಗೆ 120 ದಿನಗಳಂತೆ ಪರಿಗಣಿಸಿ, 0.36 ಟಿ.ಎಂ.ಸಿ. ನೀರನ್ನು ಸೂಳೆಕೆರೆ ಹೆಬ್ಬಳ್ಳದಿಂದ ಸಿ.ಎ.ಕೆರೆ

ಗ್ರಾಮದ ಹತ್ತಿರ ಮದ್ದೂರು-ಮಳವಳ್ಳಿ ಬ್ರಿಡ್ಜ್‌ನ ಪಕ್ಕದಲ್ಲಿ 120 ದಿನಗಳು ದಿನಪೂರ್ಣ 20 ಗಂಟೆಗಳಂತೆ ಪಂಪ್ ಮಾಡಲು ಉದ್ದೇಶಿಸಲಾಗಿದೆ. ಸದರಿ ಪ್ರಸ್ತಾವನೆಯು ದಿನಾಂಕ:27-08-2018 ರಂದು ನಡೆದ ಕಾವೇರಿ ನೀರಾವರಿ ನಿಗಮದ 64ನೇ ಮಂಡಳಿಯ ಸಭೆಯಲ್ಲಿ ಅನುಮೋದನೆಗೊಂಡಿರುತ್ತದೆ.

6. ಈ ಹಿನ್ನೆಲೆಯಲ್ಲಿ, ಮದ್ದೂರು ತಾಲ್ಲೂಕಿನ ಹೆಬ್ಬಳ್ಳದಿಂದ 0.36 ಟಿ.ಎಂ.ಸಿ. ನೀರನ್ನು ಎತ್ತಿ ಹೊಸ ಮದ್ದೂರು ಶಾಖಾ ಕಾಲುವೆಯ 47ನೇ ಕಿ.ಮೀ.ನ ಮುಂದೆ ಬರುವ ಭಾದಿತ ಅಚ್ಚುಕಟ್ಟಿಗೆ ನೀರನ್ನು ಒದಗಿಸುವ ಯೋಜನೆಯ ರೂ.17.74 ಕೋಟಿಗಳ ಡಿ.ಪಿ.ಆರ್ ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡುವಂತೆ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಇವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

7. ಸದರಿ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ : ಜಸಂಇ 166 ಎಂಎಂಕೆ 2018,**
**ಬೆಂಗಳೂರು, ದಿನಾಂಕ : 28-02-2019**

ಮದ್ದೂರು ತಾಲ್ಲೂಕಿನ ಹೆಬ್ಬಳ್ಳದಿಂದ 0.36 ಟಿ.ಎಂ.ಸಿ. ನೀರನ್ನು ಎತ್ತಿ ಹೊಸ ಮದ್ದೂರು ಶಾಖಾ ಕಾಲುವೆಯ 47ನೇ ಕಿ.ಮೀ.ನ ಮುಂದೆ ಬರುವ ಭಾದಿತ ಅಚ್ಚುಕಟ್ಟಿಗೆ ನೀರನ್ನು ಒದಗಿಸುವ ಯೋಜನೆಯ ರೂ.17.74 ಕೋಟಿ (ರೂಪಾಯಿ ಹದಿನೇಳು ಕೋಟಿ ಎಪ್ಪತ್ನಾಲ್ಕು ಲಕ್ಷಗಳು ಮಾತ್ರ) ಗಳ ವಿವರವಾದ ಯೋಜನಾ ವರದಿಗೆ ಸರ್ಕಾರದ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.

2. ಈ ಆದೇಶವನ್ನು ಆರ್ಥಿಕ ಇಲಾಖೆಯು ತನ್ನ ಟಿಪ್ಪಣಿ ಸಂಖ್ಯೆ:ಆಇ 117 ಆಕೋ-1/2019, ದಿನಾಂಕ:22-02-2019, ರಲ್ಲಿ ನೀಡಲಾದ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

28/02/19

(ಬಿ.ಹರಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ-2)
ಜಲ ಸಂಪನ್ಮೂಲ ಇಲಾಖೆ.

ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ-2),
ಜಲ ಸಂಪನ್ಮೂಲ ಇಲಾಖೆ,
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ, ಬೆಂಗಳೂರು.

ಇವರಿಗೆ :-

1. ಪ್ರಧಾನ ಮಹಾಲೇಖಪಾಲರು, (ಸಾಮಾನ್ಯ ಮತ್ತು ಸಾಮಾಜಿಕ ವಲಯ ಲೆಕ್ಕಪರಿಶೋಧನ), ಕರ್ನಾಟಕ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಬೆಂಗಳೂರು.
3. ಮುಖ್ಯ ಇಂಜಿನಿಯರ್, ನೀರಾವರಿ (ದಕ್ಷಿಣ) ವಲಯ, ಮೈಸೂರು.
4. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ಲೋ.ಇ. ಆರ್ಥಿಕ ಕೋಶ), ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಉಪ ಕಾರ್ಯದರ್ಶಿ (ಸಚಿವ ಸಂಪುಟ), ಕರ್ನಾಟಕ ಸರ್ಕಾರ (ಪ್ರಕರಣ ಸಂಖ್ಯೆ:ಸಿ-149/2019, ದಿನಾಂಕ:25-02-2019).
6. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.